**ಅ.ದಾ. ಸಂ. 4/2007 PW-2**

**ದಿನಾಂಕಃ 11.11.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ಶ್ರೀ. ಸಿ.ಎಲ್.ಎಸ್. ವಕೀಲರಿಂದಃ-

1) ನಮ್ಮ ಮುತ್ತಾತ ಮರಿಕೆಂಪಯ್ಯನ ಸಿದ್ದಯ್ಯ ಹಾಗೂ ನಮ್ಮ ತಾತ ಸಿದ್ದಯ್ಯ ರವರ ಹೆಸರಿನಲ್ಲಿ ಸರ್ವೆ ನಂ.111/3 ರಲ್ಲಿ 32 ಗುಂಟೆ ಮಾತ್ರ ಪಿತ್ರಾರ್ಜಿತವಾಗಿ ಬಂದಂತಹ ಸ್ವತ್ತು ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಸರ್ವೆ ನಂ.111/3 ರಲ್ಲಿ 32 ಗುಂಟೆ ಜಮೀನನ್ನು ಪ್ರಸ್ತುತ ದಾವೆಯಲ್ಲಿ ಸೇರಿಸಲಾಗಿದೆ. ಸದರಿ ಸ್ವತ್ತನ್ನು ಈ ದಾವೆಯಲ್ಲಿ ಸೇರಿಸಿದ್ದಿದ್ದರೂ ಸಹ ಈ ಬಗ್ಗೆ ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಸ್ವತ್ತನ್ನು ನಮ್ಮ ತಾತ ಸಿದ್ದಯ್ಯ ರವರ ಮರಣಾನಂತರ ನಮ್ಮ ಅಜ್ಜಿ ಕಾಡಮ್ಮ ರವರ ಹೆಸರಿಗೆ ಪೌತಿ ಖಾತೆ ಆಗಿದೆ ಎಂದರೆ ಸರಿ. 1 ನೇ ಪ್ರತಿವಾದಿಯು ನಿಮ್ಮ ತಾತ ಸಿದ್ದಯ್ಯ ರವರ ಬಳಿ ತನ್ನ ಅರ್ಧ ಭಾಗವನ್ನು ಕೊಡಲು ಕೇಳಿದಾಗ ನಿರಾಕರಿಸಿದರು ಎಂದರೆ ಸರಿಯಲ್ಲ. ಸದರಿ ಅರ್ಧ ಭಾಗದ ಸ್ವತ್ತಿಗೆ ಖಾತೆ ಮಾಡಿಕೊಡಲು 1 ನೇ ಪ್ರತಿವಾದಿಯು ತಹಶೀಲ್ದಾರ್ ರವರ ಹೆಸರಿಗೂ ಅರ್ಜಿ ನೀಡಿದ್ದರು ಎಂದರೆ ಗೊತ್ತಿಲ್ಲ. ಆರ್.ಆರ್. ಟಿ.ಸಿ.ಆರ್. 657/80-81 ರಂತೆ ಪ್ರಕರಣ ದಾಖಲು ಮಾಡಿಕೊಂಡರು ಎಂದರೆ ಗೊತ್ತಿಲ್ಲ. ನಂತರ ನಿಮ್ಮ ತಾತನವರಿಗೆ ನೋಟೀಸು ನೀಡಿದರೂ ಸಹ ತಹಶೀಲ್ದಾರ್ ರವರ ನ್ಯಾಯಾಲಯದಲ್ಲಿ ಹಾಜರಾಗಿರುವುದಿಲ್ಲ. ನಂತರ ಸರ್ವೆ ನಂ.111/3 ರ ಸ್ವತ್ತಿನಲ್ಲಿ ನಿಮ್ಮ ತಾತ ಹಾಗೂ 1 ನೇ ಪ್ರತಿವಾದಿಗೆ ತಲಾ 16 ಗುಂಟೆಯಂತೆ ಆದೇಶ ಹೊರಡಿಸಿ ಖಾತೆ ಪಹಣಿ ಸಹಾ ಆಗಿದೆ ಎಂದರೆ ಸರಿ.

2) ದಿಃ17.03.1997 ರಲ್ಲಿ ನಿಮ್ಮ ತಾತನಿಗೆ ಬಂದ 16 ಗುಂಟೆ ಜಮೀನನ್ನು ನಿಮ್ಮ ತಂದೆ, ಚಿಕ್ಕಪ್ಪಂದಿರು ಹಾಗೂ ನಿಮ್ಮ ತಾತ ಭೈರೂರಾಲ್ ರವರ ಮಗಳು ಸುನಂದ ರವರಿಗೆ ಮಾರಾಟ ಮಾಡಿಕೊಂಡರು ಎಂದರೆ ಸರಿ. ಸದರಿ 16 ಗುಂಟೆ ಜಮೀನನ್ನು ಎಂಟು ಗುಂಟೆಯಂತೆ ಎರಡು ಕ್ರಯ ಪತ್ರಗಳ ಮೂಲಕ ಮಾರಾಟ ಮಾಡಲಾಯಿತು ಎಂದರೆ ಒಟ್ಟಿಗೆ ಮಾರಾಟ ಮಾಡಲಾಯಿತು ಎಂದು ನುಡಿಯುತ್ತಾರೆ. ಈ ಬಗ್ಗೆ ನಾನು ಸುಳ್ಳು

ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಗೆ ಬಂದ 16 ಗುಂಟೆಯನ್ನು ದಿಃ10.02.1998 ರಲ್ಲಿ ಮಾರಾಟ ಮಾಡಿದರು ಎಂದರೆ ಸರಿ.

3) ನಮ್ಮ ತಾತ ವಂದಾರಗುಪ್ಪೇ ಗ್ರಾಮದ ಟಿಪ್ಪು ರೇಷ್ಮೇ ಫಾರಂನಲ್ಲಿ ದಿಃ01.01.1960 ರಿಂದ 30.12.1987 ರವರೆಗೆ ಸಹಾಯಕರಾಗಿ ಕೆಲಸ ನಿರ್ವಹಿಸಿದ್ದರು ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ 1965 ರಿಂದಲೂ ಕೋಳೀದೊಡ್ಡಿ ಗ್ರಾಮದಲ್ಲಿ ವಾಸವಾಗಿದ್ದರು ಎಂದರೆ ಸರಿ. 1ನೇ ಪ್ರತಿವಾದಿಯನ್ನು ಕೋಳೀದೊಡ್ಡಿ ಗ್ರಾಮದ ಮುದ್ದಯ್ಯ ರವರು ಸಾಕಿಕೊಂಡಿದ್ದರು ಎಂದರೆ ಸರಿ. ಸದರಿ ಮುದ್ದಯ್ಯ ತೋಟಿ ನೀರಗಂಟಿ ಕೆಲಸ ಮಾಡುತ್ತಿದ್ದರು ಎಂದರೆ ಗೊತ್ತಿಲ್ಲ. ಅವರ ನಂತರ 1ನೇ ಪ್ರತಿವಾದಿ ಸದರಿ ಕೆಲಸವನ್ನು ಮುಂದುವರೆಸಿಕೊಂಡು ಬರುತ್ತಿದ್ದರು ಎಂದರೆ ಸಾಕ್ಷಿ ಸಿದ್ದಯ್ಯ ಮತ್ತು ಹನುಮಯ್ಯ ಇಬ್ಬರೂ ಸಹ ಸದರಿ ಕೆಲಸವನ್ನು ಮುಂದುವರೆಸಿಕೊಂಡು ಬರುತ್ತಿದ್ದರು ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ನ್ಯಾಯಾಲಯ, ಚನ್ನಪಟ್ಟಣ